**ತಾ:29-08-2022 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್.ಎಸ್.ವಕೀಲರಿಂದಃ**

1. ಸರ್ವೆ ನಂ.171 ರಲ್ಲಿ ಆರೋಪಿತರ ಮನೆಗಳು ಇರುತ್ತದೆ ಎಂದರೆ ಸಾಕ್ಷಿಯು ಮನೆ ಇದ್ದು ಖಾಲಿ ಜಾಗವೂ ಇರುವುದಾಗಿ ನುಡಿದಿರುತ್ತಾರೆ. ಸರ್ವೆ ನಂ.171 ಕ್ಕೆ ಸಂಭಂದಿಸಿದಂತೆ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ. ಚಾಸಾ.1 ರವರು ನಿಪಿ.1 ದೂರನ್ನು ನಂದಗುಡಿಯಲ್ಲಿ ಬೆರಳಚ್ಚು ಮಾಡಿಸಿದ್ದು ಅವರಿಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಿಪಿ.1 ಅನ್ನು ಬೆರಳಚ್ಚು ಮಾಡಿಸುವಾಗ ನಾನು, ಚಾಸಾ.1 ಮತ್ತು 3 ರವರು ಇದ್ದೆವು. ನಿಪಿ.1 ಅನ್ನು ಬೆರಳಚ್ಚು ಮಾಡಿದ ಸ್ಥಳದಲ್ಲಿ ಸಹಿ ಮಾಡಿ ನೀಡಿರುತ್ತೇವೆ. ಬೆರಳಚ್ಚು ಮಾಡಿದವರು ದೂರು ಈ ರೀತಿಯಾಗಿ ಬರೆಯಬೇಕು ಎಂದು ಹೇಳಿ ಬೆರಳಚ್ಚು ಮಾಡಿದ್ದು, ನಾವು ಅದಕ್ಕೆ ಸಹಿ ಮಾಡಿರುತ್ತೇವೆ. ನಿಪಿ.1 ಅನ್ನು ಬೆರಳಚ್ಚು ಮಾಡಿಕೊಟ್ಟವರ ಹೆಸರನ್ನು ನಾನು ಪೋಲೀಸರಿಗೆ ತಿಳಿಸಿಲ್ಲ.

2. 1 ರಿಂದ 7 ನೇ ಆರೋಪಿತರು ನಮ್ಮ ಸಂಭಂದಿಕರು ಎಂದರೆ ಸರಿ. ಸರ್ವೆ ನಂ.171 ಜಮೀನು ಇರುವ ರಸ್ತೆಯಲ್ಲಿ 10-20 ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು 10 ಮನೆ ಇರುವುದಾಗಿ ನುಡಿದಿರುತ್ತಾರೆ. ಸರ್ವೆ ನಂ.171 ರಲ್ಲಿ ಕಿರುಚಾಟ ಕೂಗಾಟ ಆದಲ್ಲಿ 10 ಮನೆಗೂ ಕೇಳಿಸುತ್ತದೆ ಎಂದರೆ ಸರಿ. ಚಾಸಾ.6

ರವರು ಹಳೆ ಊರಿನಲ್ಲಿ ವಾಸವಿದ್ದು, ಸರ್ವೆ ನಂ.171 ರಿಂದ ಅಂದಾಜು 10 ಕಿ.ಮೀ ದೂರದಲ್ಲಿ ಅವರ ಮನೆ ಇರುತ್ತದೆ. ಚಾಸಾ.7 ರವರ ಮನೆ ಹೊಸಕೋಟೆಯಲ್ಲಿ ಇರುತ್ತದೆ. ಸರ್ವೆ ನಂ.171 ರಿಂದ ಹೊಸಕೋಟೆ 20 ಕಿ.ಮೀ ದೂರದಲ್ಲಿ ಇರುತ್ತದೆ. ನಿಪಿ.3 ರಿಂದ 6 ರ ಫೋಟೋಗಳನ್ನು ನಾವೇ ಪೋಲೀಸರಿಗೆ ನೀಡಿದ್ದು ಅದನ್ನು ಎಲ್ಲಿ ತೆಗೆಸಿರುತ್ತೇವೆ ಹಾಗೂ ಯಾರು ತೆಗೆದಿರುತ್ತಾರೆ ಎಂದು ಪೋಲೀಸರಿಗೆ ಹೇಳಿರುತ್ತೇವೆ. ನಿಪಿ.3 ರಿಂದ 6 ರ ಫೋಟೋಗಳನ್ನು ಇಂತ ಸ್ಥಳದಲ್ಲಿ ತೆಗೆಸಿರುತ್ತೇವೆ ಎಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ತೆಗೆದಿರುವುದಾಗಿ ಉತ್ತರಿಸಿರುತ್ತಾರೆ. ಆಸ್ಪತ್ರೆಯಲ್ಲಿ ವೈದ್ಯರು ಇದ್ದರು. ಯಾರು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆಂದು ವೈದ್ಯರ ಬಳಿ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಘಟನೆ ಬಗ್ಗೆ ತಿಳಿಸಿರುವುದಾಗಿ ಹೇಳಿ, ನಂತರ 1 ನೇ ಆರೋಪಿ ಮಂಜುನಾಥ್ ಹಲ್ಲೆ ಮಾಡಿರುವುದಾಗಿ ತಿಳಿಸಿರುವುದಾಗಿ ಉತ್ತರಿಸಿರುತ್ತಾರೆ.

3. ದಿನಾಂಕ 13-10-2018 ರಂದು ನಾನು ಆಸ್ಪತ್ರೆಯಲ್ಲಿ ಸಂಜೆ 08:00 ಅಥವಾ 08:30 ಗಂಟೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾವು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ದೂರು ತಯಾರು ಮಾಡಿಸಿರುತ್ತೇವೆ. ದಿನಾಂಕ 13-10-2018 ರಂದು ನಾವು ಚಿಕಿತ್ಸೆ ಪಡೆದುಕೊಂಡ ಸಮಯದಲ್ಲಿ ಪೋಲೀಸರು ಆಸ್ಪತ್ರೆಗೆ ಬಂದು ನಮ್ಮ ಹೇಳಿಕೆ ಪಡೆದಿಲ್ಲ. ಯಾವುದೇ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಜಮೀನಿನಲ್ಲಿ ಮನೆ ಕಟ್ಟುವ ವಿಸ್ತೀರ್ಣದ ಬಗ್ಗೆ ರಾಜಿ ಪಂಚಾಯ್ತಿ ಆಗಿತ್ತು ಎಂದರೆ ಸರಿ. ದಿನಾಂಕ

13-10-2018 ಬೆಳಗ್ಗೆ 11:00 ಗಂಟೆಗೆ ಆರೋಪಿತರು ಗುಂಡಿ ತೋಡಿ ಚಪ್ಪಡಿಕಲ್ಲು ನಿಲ್ಲಿಸಿದ್ದರು ಎಂದರೆ ಸರಿ. ಅದೇ ದಿನ ಸಂಜೆ 04:00 ಗಂಟೆ ಸಮಯದಲ್ಲಿ ಆರೋಪಿತರು ಬಂದು ಗಲಾಟೆ ಮಾಡಿದ್ದರು ಎಂದು ನಾನು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಸಂಜೆ 04:00 ಗಂಟೆ ಸಮಯಕ್ಕೆ ಚಪ್ಪಡಿಕಲ್ಲು ನಿಲ್ಲಿಸಿದ್ದರು ಎಂದರೆ ಸಾಕ್ಷಿಯು ಚಪ್ಪಡಿಕಲ್ಲು ನಿಲ್ಲಿಸಿದ್ದು ನಮ್ಮ ಮಾವ ಬಂದು ಕುಳಿತು ಮಾತನಾಡೋಣ ಚಪ್ಪಡಿಕಲ್ಲು ನಿಲ್ಲಿಸಬಾರದೆಂದು ತಿಳಿಸಿದ್ದರು ಎಂದು ಉತ್ತರಿಸಿರುತ್ತಾರೆ. ಆ ದಿನ 04:00 ಗಂಟೆ ಸಮಯದಲ್ಲಿ ಯಾವುದೇ ಗಲಾಟೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.3 ರಿಂದ 6ರ ಫೋಟೋಗಳನ್ನು ನಾವು ತಯಾರಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ತನ್ನ ಸಮಕ್ಷಮ ತೆಗೆದಿರುವುದಾಗಿ ವೈದ್ಯರು Certificate ನೀಡಿಲ್ಲ ಎಂದರೆ ಸರಿಯಲ್ಲ. ಸದರಿ Certificate ಅನ್ನು ನಾನು ಪೋಲೀಸರಿಗೆ ನೀಡಿರುತ್ತೇನೆ.

4. ಮು.ಮಾ.1 ಮತ್ತು 2 ರ ವಸ್ತುಗಳಿಂದ ಆರೋಪಿತರು ನಮಗೆ ಹೊಡೆದಿಲ್ಲ ಎಂದರೆ ಸಾಕ್ಷಿಯು ಚಾಸಾ.1 ರವರಿಗೆ ಕಬ್ಬಿಣದ ರಾಡ್ ನಿಂದ ಹೊಡೆದಿದ್ದು ನನಗೆ ದೊಣ್ಣೆಯಿಂದ ಹೊಡೆದಿರುವುದಾಗಿ ಉತ್ತರಿಸಿರುತ್ತಾರೆ. ಸದರಿ ವಸ್ತುಗಳನ್ನು ಯಾವುದೇ ಆರೋಪಿತರು ಉಪಯೋಗಿಸಿಲ್ಲ, ಸದರಿ ವಸ್ತುಗಳಿಂದ ಯಾವುದೇ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ನಾನಾಗೇ ಬಿದ್ದು ಮಾಡಿಕೊಂಡ ಗಾಯವನ್ನು ಆರೋಪಿತರು ಮಾಡಿರುವುದಾಗಿ ಸುಳ್ಳು ನುಡಿದಿರುತ್ತೇನೆ ಎಂದರೆ

ಸರಿಯಲ್ಲ. ನನ್ನನ್ನು ಚಾಸಾ.3 ರವರು ಆಸ್ಪತ್ರೆಗೆ ಕರೆದುಕೊಂಡು ಬಂದ ಬಗ್ಗೆ ಹಾಗೂ ನನ್ನ ಬಾವ ಅಂದರೆ ಚಾಸಾ.5 ರವರು ಚಾಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡುಬಂದಿರುವುದಾಗಿ ನಾನು ಹೇಳಿರುತ್ತೇನೆ. ಸಿವಿಲ್ ವ್ಯಾಜ್ಯ ಇದ್ದ ಕಾರಣ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸಾಕ್ಷಿಯು ಕ್ರಿಮಿನಲ್ ಪ್ರಕರಣ ಆದ ನಂತರ ಸಿವಿಲ್ ವ್ಯಾಜ್ಯ ಆಗಿರುವುದಾಗಿ ಉತ್ತರಿಸಿರುತ್ತಾರೆ. ಸರ್ವೆ ನಂ.171 ರ ಸ್ವತ್ತಿನ ಬಗ್ಗೆ ಮನೆ ಕಟ್ಟುವ ವಿಚಾರವಾಗಿ ಸುಮಾರು ವರ್ಷಗಳಿಂದ ವ್ಯಾಜ್ಯ ಇರುವ ಕಾರಣ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃಇಲ್ಲ</u>

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.